## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

### ಸೂಚನೆ

ಬಾಗಲಕೋಟೆ ಜಿಲ್ಲೆಯ ತೇರದಾಳ ತಾಲ್ಲೂಕಿನ ಮಹಾಲಿಂಗಪೂರ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿಸಬೇಕೆಂಬ ಅಲ್ಲಿನ ಜನರ ಬಹುದಿನಗಳ ಮಹಾದಾಸೆ ಮತ್ತು ಅಲ್ಲಿನ ಒಕ್ಕೊರಲಿನ ಕೂಗಾಗಿದೆ. ಆದರೆ ತಾಲ್ಲೂಕು ಪುನರ್ ರಚನಾ ಸಮಿತಿಯು ಶಿಫಾರಸ್ಸು ಮಾಡದೇ ಇರುವ ಪಟ್ಟಣಗಳನ್ನು ನೂತನ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಹೀಗಾಗಿ ನೂತನ ಹೋಬಳಿಯನ್ನು ಸೃಷ್ಟಿಸದೇ ನೂತನ ತಾಲ್ಲೂಕು ಕೇಂದ್ರವನ್ನಾಗಿ ರಚಿಸಲು ಸೂಕ್ತವಾಗಿದೆ. ಹೀಗಿದ್ದರೂ ಸಹ ಸದರಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸದೇ ಇರುವುದು ವಿಷಾದನೀಯವಾಗಿದೆ.

ಸದರಿ ಪಟ್ಟಣವು ಒಟ್ಟು 1 ಲಕ್ಷ 50 ಸಾವಿರಕ್ಕಿಂತ ಅಧಿಕ ಜನಸಂಖ್ಯೆಯನ್ನು ಹೊಂದಿದ್ದು, 1975 ರಲ್ಲಿ ಮಹಾಲಿಂಗಪೂರ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಮಾಡಲು ಯೋಗ್ಯವೆಂದು ವ್ಹಿ. ಎಲ್ ಎಸ್ ಪ್ರಕಾಶರಾವ್ ಮತ್ತು ಎಸ್ ಎಲ್. ಭಟ್ ಅಯೋಗದ ವರದಿಯಲ್ಲಿ ಉಲ್ಲೇಖಿಸಿರುವುದು ಹಾಗೂ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಪಾಟೀಲ್ ಪುಟ್ಟಣ್ಣನವರು ಸಹ ಸರ್ಕಾರಕ್ಕೆ ಶಿಪಾರಸ್ಸು ಮಾಡಿದ್ದರು ಮತ್ತು ಸನ್ 2018ರಲ್ಲಿ ಸದರಿ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಲು ಆಗಿನ ಸಚಿವ ಸಂಪುಟದ ಅನುಮತಿ ನೀಡಿರುವುದು ಗಮನಿಸಬಹುದಾಗಿದೆ. ಸದರಿ ಪಟ್ಟಣವು ರಾಜ್ಯದ ಪ್ರಮುಖ ಬೆಲ್ಲದ ವ್ಯಾಪಾರ (ಕೃಷಿ ಮಾರುಕಟ್ಟೆ) ಕೇಂದ್ರವಾಗಿದೆ ಹಾಗೂ ರಾಷ್ಟ್ರಾದ್ಯಂತ ಬೆಲ್ಲದ ವಿತರಣೆಗೆ ಪ್ರಸಿದ್ಧಿಯಾಗಿದೆ. ಈ ಪಟ್ಟಣವು ಸಂಪೂರ್ಣ ನೀರಾವರಿ ಪ್ರದೇಶ ಹೊಂದಿದ್ದು, ಹಾಗೂ ಸಕಲ ಸೌಲಭ್ಯಗಳುಳ್ಳ ಸಂಪದ್ಭರಿತ ಪಟ್ಟಣವಾಗಿದೆ.

ಕಳೆದ 30 ವರ್ಷದಿಂದ ಮಹಾಲಿಂಗಪೂರ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಬೇಕೆಂದು ಹಲವಾರು ಸಂಘಟನೆಗಳು ಸತ್ಯಾಗ್ರಹಗಳನ್ನು ಮಾಡುತ್ತಾ ಬಂದಿವೆ ಹಾಗೂ ಸದರಿ ಪಟ್ಟಣವು ಸರ್ಕಾರಕ್ಕೆ ಉತ್ತಮ ಆದಾಯ ನೀಡುತ್ತಿದ್ದು, ಸದರಿ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಲು ಸರ್ಕಾರದ ಇಚ್ಛಾಶಕ್ತಿಯ ಕೊರತೆ ಕಾರಣವಾಗಿದೆ ಎಂದು ಅಲ್ಲಿನ ಜನರ ನೋವಾಗಿದೆ.

ಪ್ರಸ್ತುತ ಅಲ್ಲಿನ ಜನತೆಯ "ಪ್ರಾಣ ಬಿಟ್ಟವು ತಾಲೂಕು ಬಿಡೆವು" ಎಂಬ ನಿಲುವಿನೊಂದಿಗೆ ಸುಮಾರು ಕಳೆದ 600 ದಿನಗಳಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಯೋವೃದ್ಧರು ಸೇರಿದಂತೆ “ಅ ಮರಣ" ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದು ಹಾಗೂ ಸದರಿ ಮಹಾಲಿಂಗಪೂರ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸುವಂತೆ ಪಟ್ಟು ಹಿಡಿದು 20 ಜನ ವಯೋವೃದ್ಧರು ಅಸ್ವಸ್ಥರಾಗಿರುವುದು ದುರಷ್ಟಕರ ಸಂಗತಿಯಾಗಿದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ಬಾಗಲಕೋಟೆ ಜಿಲ್ಲೆಯ ತೇರದಾಳ ತಾಲೂಕಿನ ಮಹಾಲಿಂಗಪೂರ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಬೇಕೆಂದು ಮಾನ್ಯ ಕಂದಾಯ ಸಚಿವರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

### ಹೇಳಿಕೆ:

ಮಹಾಲಿಂಗಪೂರ ಪಟ್ಟಣವು ಈ ಹಿಂದೆ ಅವಿಭಜಿತ ಜಮಖಂಡಿ ತಾಲ್ಲೂಕಿನಲ್ಲಿದ್ದು, ಪ್ರಸ್ತುತ ಹೊಸದಾಗಿ ರಚನೆಯಾಗಿರುವ ರಬಕವಿ-ಬನಹಟ್ಟಿ ತಾಲ್ಲೂಕಿನಲ್ಲಿರುತ್ತದೆ. ರಬಕವಿ-ಬನಹಟ್ಟಿ ತಾಲ್ಲೂಕು ರಚನೆಯಾದ ಸಂದರ್ಭದಲ್ಲಿ 31 ಗ್ರಾಮಗಳನ್ನು ಒಳಗೊಂಡಿತ್ತು. ಪ್ರಸ್ತುತ 9 ಗ್ರಾಮಗಳನ್ನು ಒಳಗೊಂಡಂತೆ ಹೊಸದಾಗಿ ತೇರದಾಳ ತಾಲ್ಲೂಕು ರಚನೆಯಾದ ನಂತರ ರಬಕವಿ-

ಬನಹಟ್ಟಿ ತಾಲ್ಲೂಕಿನಲ್ಲಿ 22 ಗ್ರಾಮಗಳು ಮಾತ್ರ ಉಳಿದಿರುತ್ತವೆ. ಈ ಗ್ರಾಮಗಳನ್ನು ವಿಭಜಿಸಿ ಮಹಾಲಿಂಗಪೂರ ತಾಲ್ಲೂಕನ್ನು ರಚಿಸಿದಲ್ಲಿ ಎರಡೂ ತಾಲ್ಲೂಕುಗಳು ಅತ್ಯಂತ ಚಿಕ್ಕ ತಾಲ್ಲೂಕುಗಳಾಗಿವೆ.

ಈ ಹಿಂದೆ ತಾಲ್ಲೂಕುಗಳ ಪುನರ್ ವಿಂಗಡಣೆ ಮಾಡಲು ಕೊನೆಯದಾಗಿ ರಚಿಸಿದ್ದ ಶ್ರೀ ಎಂ.ಬಿ. ಪ್ರಕಾಶ್ ನೇತೃತ್ವದ ಸಮಿತಿಯು ಮಹಾಲಿಂಗಪೂರ ಪಟ್ಟಣವನ್ನು ಹೊಸ ತಾಲ್ಲೂಕು ಕೇಂದ್ರವನ್ನಾಗಿ ರಚಿಸಲು ಶಿಫಾರಸ್ಸು ಮಾಡಿರುವುದಿಲ್ಲ.

ಇದರ ಜೊತೆಗೆ, ಹೊಸದಾಗಿ ತಾಲ್ಲೂಕುಗಳನ್ನು ರಚಿಸುವ ವಿಷಯವು ಸರ್ಕಾರದ ಸಾಮಾನ್ಯ ನೀತಿಗೆ ಸಂಬಂಧಿಸಿದ್ದಾಗಿದೆ. ನೂತನ ತಾಲ್ಲೂಕನ್ನು ರಚಿಸಬೇಕಾದರೆ ಭೌಗೋಳಿಕ ಹಿನ್ನೆಲೆ, ಸಾರ್ವಜನಿಕ ಹಿತಾಸಕ್ತಿ ಮತ್ತು ಆಡಳಿತಾತ್ಮಕ ಅಗತ್ಯತೆಗಳ ಜೊತೆಗೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸಹ ಅವಲಂಬಿಸಿರುತ್ತದೆ. ಪ್ರಸ್ತುತ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲು ಸರ್ಕಾರವು ತಾತ್ವಿಕ ನಿರ್ಣಯ ಕೈಗೊಂಡಿರುವುದಿಲ್ಲ. ಪ್ರಸ್ತಾಪಿತ ಮಹಾಲಿಂಗಪೂರ ತಾಲ್ಲೂಕನ್ನು ರಚಿಸಿದಲ್ಲಿ ಅತ್ಯಂತ ಚಿಕ್ಕ ತಾಲ್ಲೂಕಾಗಲಿದೆ. ಹೀಗಾಗಿ ಮಹಾಲಿಂಗಪೂರ ತಾಲ್ಲೂಕಿನ ಪ್ರಸ್ತಾವನೆಯನ್ನು ಪರಿಗಣಿಸುವುದು ಸೂಕ್ತವಲ್ಲವೆಂದು ಸರ್ಕಾರವು ಭಾವಿಸಿದೆ.

**ಸಂಖ್ಯೆ: ಕಂಇ 83 ಎಲ್‌ಆರ್‌ಡಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು